■ ವಿಶಾಖ ಎನ್.



# ಶಾರುಕ್ ಬೆನ್ನುತಟ್ಟಿದ ಕಮಲ್

ಕಮಲ ಹಾಸನ್ ಹಾಗೂ ಶಾರುಕ್ ಖಾನ್ ನಡುವೆ ವರ್ಷಗಳಿಂದ ಸಜ್ಜನಿಕೆಯ ಸಂಬಂಧವೊಂದು ಇದೆ. 'ಹೇ ರಾಮ್' ಸಿನಿಮಾ ಮಾಡಿದಾಗ ಕಮಲ ಹಾಸನ್ ಈ ನಟನ ಸಹಕಾರ ಕೋರಿದ್ದರು. ಪಾತ್ರವೊಂದರಲ್ಲಿ ಅಭಿನಯಿಸುವಂತೆ ಕೇಳಿಕೊಂಡಿದ್ದರು. ಆಗ ಮುಕ್ತ ಮನಸ್ಸಿನಿಂದ ಶಾರುಕ್ ಒಪ್ಪಿ, ನಟಿಸಿದ್ದು ನಮಗೆಲ್ಲರಿಗೂ ತಿಳಿದೇ ಇದೆ.

ಹಾಗೆ ನೋಡಿದರೆ, ಶಾರುಕ್ ಖಾನ್ ಇತ್ತೀಚಿನಲಾಗಿ ದಕ್ಷಿಣ ಭಾರತದ ನಿರ್ದೇಶಕರು, ತಂತ್ರಜ್ಞರನ್ನು ಬಹುವಾಗಿ ನೆಚ್ಚಿಕೊಳ್ಳುತ್ತಿದ್ದಾರೆ. 'ಜವಾನ್' ಚಿತ್ರವನ್ನು ನಿರ್ದೇಶಿಸಿದ್ದ ಅಟ್ಲಿ ತಮಿಳುನಾಡು ನೆಲದವರು. ಆ ಸಿನಿಮಾದ ಹಾಡುಗಳಿಗೆ ಸ್ವರ ಸಂಯೋಜನೆ ಮಾಡಿದ್ದ ಅನಿರುದ್ಧ್ ರವಿಚಂದರ್ ಕೂಡ ಅದೇ ತವರಿನವರು. ಗಲ್ಲಾಪೆಟ್ಟಿಗೆಯಲ್ಲಿ ದೊಡ್ಡ ಯಶಸ್ಸನ್ನು ಕಂಡ 'ಜವಾನ್', ಶಾರುಕ್ ಸಿನಿಮಾ ಕನಸಿಗೆ ಇಂಧನವಾಗಿ ಒದಗಿಬಂದಿರುವುದು ನಿಜ.

ದಶಕಗಳ ಹಿಂದೆ ಕಮಲ ಹಾಸನ್ ಅವರು ಹಿಂದಿ ಚಿತ್ರರಂಗಕ್ಕೆ ಕಾಲಿಟ್ಟಿದ್ದು 'ಏಕ್ ದೂಜೆ ಕೆ ಲಿಯೆ' ಸಿನಿಮಾ ಮೂಲಕ. ಆ ಚಿತ್ರ ಗೆದ್ದ ಬಳಿಕ ಕಮಲ್ ಕೂಡ ಒಂದು ಮಟ್ಟಿಗೆ ಪ್ಯಾನ್ ಇಂಡಿಯಾ ನಟ ಎನಿಸಿಕೊಂಡರು. ಅವರು ಹೆಸರು ದಕ್ಷಿಣ ಭಾರತದಾಚೆಗೂ ವ್ಯಾಪಿಸಿತು. ಅದಾದ ನಂತರ ಕೆಲವು ಹಿಂದಿ ಚಿತ್ರಗಳ ಅವಕಾಶಗಳೂ ಅವರನ್ನು ಹುಡುಕಿಕೊಂಡು ಬಂದದ್ದು ಗೊತ್ತೇ ಇದೆ.



ಹೀಗೆ ದೇಶದ ಚಿತ್ರಕರ್ಮಿಗಳು ಪರಸ್ಪರ ಸಾಥ್ ನೀಡುವ ಪರಿಪಾಟ ಈಗೀಗ ಮಾರುಕಟ್ಟೆ ದೃಷ್ಟಿಯಿಂದ ಮುಖ್ಯವಾಗಿದೆ. 'ಇಂಡಿಯನ್ 2' ಸಿನಿಮಾದ ಪ್ರಚಾರಕ್ಕೆಂದು ಶಾರುಕ್ ಅವರ ಕೈ ಕುಲುಕಿ, ಕಮಲ ಹಾಸನ್ ಇತ್ತೀಚೆಗೆ ನೆರವು ಕೋರಿದರು. ಆ ಸಂದರ್ಭದಲ್ಲಿ ಹಿಂದಿ ಸೂಪರ್‌ಸ್ಟಾರ್ ಕುರಿತು ನಟನ ಕೌಶಲದಲ್ಲಿ ಸಾಕಷ್ಟು ಮೇಲಿರುವ ಕಮಲ್ ಮುಕ್ತಕಂಠದಿಂದ ಹೊಗಳಿಕೆಯ ಮಾತನ್ನಾಡಿದರು.

'ನನ್ನ ದೃಷ್ಟಿಯಲ್ಲಿ ಶಾರುಕ್ ಸೂಪರ್‌ಸ್ಟಾರ್ ಅಲ್ಲ; ಆತ ಕಲೋಪಾಸಕ. ಕಲಾ ಪರಿಣತರಿಗೆ ಇರಬೇಕಾದ ಗುಣವೂ ಅವರಲ್ಲಿ ಇದೆ' ಎಂದು ಕಮಲ್ ಬೆನ್ನುತಟ್ಟಿದರು.

'ಹೇ ರಾಮ್' ಸಿನಿಮಾದಲ್ಲಿ ಅಭಿನಯಿಸಲು ಶಾರುಕ್ ಚಿಕ್ಕಾಸು ಸಂಭಾವನೆಯನ್ನೂ ಪಡೆದಿರಲಿಲ್ಲ ಎನ್ನುವುದನ್ನೂ ಅವರು ಸ್ಮರಿಸಿದರು.

'ಏಕ್ ದೂಜೆ ಕೆ ಲಿಯೆ' ಸಿನಿಮಾ ತಯಾರಾದಾಗ ತಮಗೆ ಹಿಂದಿ ಭಾಷೆ ಮಾತನಾಡುವುದು ತುಂಬಾ ಕಷ್ಟವಿತ್ತು. ಅದನ್ನೆಲ್ಲ ಮನ್ನಿಸಿ, ಜನರು ತಮ್ಮನ್ನು ಸ್ವೀಕರಿಸಿದ್ದು ದೊಡ್ಡ ಮೆಚ್ಚುಗೆ ಎಂದೂ ನೆನಪಿಸಿಕೊಂಡರು.

ಜುಲೈ 12ರಂದು ಶಂಕರ್ ನಿರ್ದೇಶನದ 'ಇಂಡಿಯನ್ 2' ಚಿತ್ರ ತೆರೆಕಾಣಲಿದ್ದು, ನಿರೀಕ್ಷೆಯ ಭಾರ ಕಮಲ ಹಾಸನ್ ಮೇಲಿದೆ. ■



## ಅನಿಮಲ್: ಮಂಥನ ಆಗಬೇಕಿತ್ತು...

ಶರ್ಮಿಳಾ ಟ್ಯಾಗೋರ್ ನಟಿಯಾಗಿ ಈಗಲೂ ಜನಮಾನಸದಲ್ಲಿ ಉಳಿದಿರುವವರು. ಹಿಂದೆ ಅವರು ಕೇಂದ್ರ ಸಿನಿಮಾ ಪ್ರಮಾಣಪತ್ರ ಮಂಡಳಿಯ (ಸಿಬಿಎಫ್‌ಸಿ) ಅಧ್ಯಕ್ಷೆಯಾಗಿಯೂ ಇದ್ದವರು. ಆಗ ಅನೇಕ ವಿವಾದಾತ್ಮಕ ಚಲನಚಿತ್ರಗಳು ಚರ್ಚೆಗೆ ಒಳಪಟ್ಟಿದ್ದೂ ಉಂಟು.

ಇತ್ತೀಚೆಗೆ ಶರ್ಮಿಳಾ ಅವರು 'ದಿಲ್‌ಸೆ ಕಪಿಲ್ ಸಿಬಲ್' ಎಂಬ ಕಾರ್ಯಕ್ರಮದಲ್ಲಿ ಮನಬಿಚ್ಚಿ ಮಾತನಾಡುವಾಗ, 'ಅನಿಮಲ್' ಹಿಂದಿ ಚಿತ್ರದ ವಿವಾದದ ಕುರಿತು ಮಾತನಾಡಿದರು.

'ಅನಿಮಲ್ ಹಿಂದಿ ಚಿತ್ರದಲ್ಲಿ ಹಿಂಸೆ ಇರುವುದಷ್ಟೇ ಅಲ್ಲ, ಸ್ತ್ರೀದ್ವೇಷವೂ ಇದೆ. ಆದರೂ ಅದು ದೊಡ್ಡ ಮಟ್ಟದ ಯಶಸ್ಸನ್ನು ಗಳಿಸಿತು. ಹೀಗೆ ಆದಾಗ ನಾವು, ಸುಮ್ಮನೆ ಚಿತ್ರವನ್ನು ಉಪೇಕ್ಷೆ ಮಾಡಲಾಗದು. ಇಂತಹ ಚಿತ್ರವನ್ನು ಹೆಣ್ಣುಮನಸ್ಸು ಹೇಗೆ ನೋಡುತ್ತದೆ ಎಂಬ ಸೂಕ್ಷ್ಮದ ಕಡೆಗೂ ನಿಗಾ ಮಾಡಬೇಕು. ಎಷ್ಟೋ ಹೆಣ್ಣುಮಕ್ಕಳು ಆ ಚಿತ್ರದ ನಾಯಕನು ನಾಯಕಿಯನ್ನು ಪ್ರೀತಿಸುವಂತೆಯೇ ತಮ್ಮನ್ನು ಕೂಡ ಪುರುಷ ಪ್ರೀತಿಸಬೇಕು ಎಂದು ಆಗ ಮಾತನಾಡಿಕೊಂಡಿದ್ದರು. ಇಂತಹ ಸಂಗತಿಯ ಕುರಿತೂ ಕಿವಿಗೊಡಬೇಕು' ಎಂದು ಶರ್ಮಿಳಾ ಸಲಹೆ ಕೊಟ್ಟರು.

ಗಳಿಕೆಯ ವಿಷಯದಲ್ಲಿ ಸದ್ದು ಮಾಡುವ ಯಾವ ಸಿನಿಮಾವನ್ನೂ ಉಪೇಕ್ಷಿಸಬಾರದು ಎಂದು ಅವರು ಪದೇಪದೇ ಹೇಳಿದರು. ಇಂತಹ ಚಿತ್ರಗಳನ್ನು ಪ್ರೇಕ್ಷಕರು ಯಾಕೆ ಮೆಚ್ಚಿಕೊಳ್ಳುತ್ತಾರೆಂದು ಅವಲೋಕನ ಆಗಬೇಕು ಎನ್ನುವ ಕಾಳಜಿ ಅವರ ಅಭಿಪ್ರಾಯದಲ್ಲಿತ್ತು. ■